ಬಿಟ್ಟು ಹೊರಟು ಹೋಗಿದ್ದ. ಅವಾಗಿಂದ ಗುಡಿಯ ಉತ್ಸವಮೂರ್ತಿ ಹನ್ಮಪ್ಪ ಬೂದಿ ಬಸಪ್ಪನ ತಲೆಮ್ಯಾಲೆ ಹೊಂಟು ಬಂದಿಲ್ಲ. ಉತ್ಸವಮೂರ್ತಿ ಆ ಊರೋರ ಭಾಷೆಯಲ್ಲಿ ಹೊಂಡದೇವ್ರು. ಹನ್ಮಪ್ಪನ ಹೊರುವ ಬಾಬ್ತು ಬಸಪ್ಪನ ಮನೆತನಕ್ಕಲ್ಲದೆ ಬೇರೆಯವರಿಗಿಲ್ಲ. ಹೊಂಡದೇವ್ರು ಹಾಗೆ ಸುಮ್ ಸುಮ್ನೆ ಹೊಂಟು ಬರಲ್ಲ. ಅದರ ಮುಂದೆ ಬಿರುದು, ಬಾವಲಿ, ಕಹಳೆ, ತುಡುಮು, ಚವರಿ ಮತ್ತು ಹಿಲಾಲು ಇರಲೇಬೇಕು. ಹಿಲಾಲು ಹಿಡಿಯೊ ಸಣ್ಣೀರ ಸತ್ತ ನಾಲ್ಕು ತಿಂಗ್ಳಿಂದ ಹೊಂಡದೇವ್ರು ಹೊಂಟಿಲ್ಲ. ಪ್ರತಿ ಶನಿವಾರ ಹನ್ಮಪ್ಪ ಬೂದಿ ಬಸಪ್ಪನ ತಲೆ ಮೇಲೆ ಮೆರವಣಿಗೆ ಹೊಂಟು ಊರು ಮುಂದಿನ ಕರೆಕಲ್ಲು ತನಕ ಹೋಗಿ ಪೂಜೆ ಮುಗಿಸಿ ಮತ್ತೆ ಬಂದು ಗುಡಿ ಮುಂದೆ ನಿಲ್ತಿತ್ತು. ವಾರದಿಂದ ಕಾದೋರು ದೇವ್ರ ಅಪ್ಪಣೆಗಾಗಿ ಮುಗಿಬೀಳೋರು. ಮನ್ಯಾಗ ಒಂದಕ್ಕೊಂದು ಸರಿಯಿಲ್ಲ, ಮಗ ಮನೆಬಿಟ್ಟು ಹೋಗ್ಯಾನೆ, ಎಡ್ಡಾಗ್ಲು ಸರಿಯಿಲ್ಲ ಏನ್ಮಾಡೋದು? ಮನೆ ಕಟ್ಲೆ ಮಾಡೋದು ಯಾವಾಗ – ಇಂತ ಕಷ್ಟಗಳನ್ನ ಹೊಂಡದೇವ್ರ ಮುಂದಿಟ್ಟು ಪರಿಹಾರ

